# ವಿದ್ಯಾಭ್ಯಾಸ - ಒಂದು ಚಿಂತನೆ

ಬ್ರ. ಪ್ರಹ್ಲಾದ

**ಇಂದಿನ ಶಿಕ್ಷಣಕ್ಷೇತ್ರದಲ್ಲಿ ಇರಬೇಕಾದ ಮೌಲಿಕ ಅಂಶಗಳ ಕುರಿತು ವಿಚಾರ ಮಾಡಿರುವ ಲೇಖಕರು ಬೇಲೂರು ಮಠದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.**




ತಾಯಿಯೇ ಮೊದಲ ಗುರುವೆಂಬ ನಾಣ್ನುಡಿಯನ್ನು ಆಲಿಸಿದಾಗ ಅದು ಹೇಗೆ ಎಂಬ ಪ್ರಶ್ನೆ ಅಥವಾ ಅನುಮಾನವೇ ಬರದು. ಕಾರಣ ಅದು ಸರ್ವವಿದಿತ. ಅಳುವೊಂದನ್ನು ಬಿಟ್ಟರೆ ಬೇರೇನೂ ಅರಿಯದ ಆ ಹಸುಗೂಸೆಂಬ ಒಂದು ಮಾಂಸದ ಮುದ್ದೆಯನ್ನು ಸಮಾಜದ ಒಬ್ಬ ಸದಸ್ಯನನ್ನಾಗಿಸುವಲ್ಲಿ ಅವಳ ಮಡಿಲೇ ಮೊದಲ ಶಾಲೆ. ಅಮ್ಮ ಎಂಬ ನುಡಿಯಿಂದ ತೊಡಗುವ ಕಲಿಕೆಯು ಮುಂದೆ ವಿದ್ಯಾಭ್ಯಾಸಕ್ಕೆ ಮೆಟ್ಟಿಲಾಗುತ್ತದೆ. ಮಣ್ಣಿನಲ್ಲಿ ಹುದುಗಿರುವ ಚಿನ್ನವನ್ನು ಹೊರತಂದು ಅದನ್ನು ಕಾಯಿಸಿ, ಶುದ್ಧವಾದ ಚಿನ್ನವಾಗಿಸುವ ಅಕ್ಕಸಾಲಿಗನಂತೆ ತಾಯಿ ಮತ್ತು ಶಿಕ್ಷಕರ ಪಾತ್ರವು ವ್ಯಕ್ತಿಯ ವಿಕಸನದಲ್ಲಿ ಬಹು ಮುಖ್ಯ. ವಿಕಸನಕ್ಕೆ ಸಾಧನವಾಗುವುದೇ ವಿದ್ಯಾಭ್ಯಾಸವಾಗುತ್ತದೆ.

ಆಧುನಿಕ ಭಾರತದ ಯುಗಪ್ರವರ್ತಕರಾದ ಸ್ವಾಮಿ ವಿವೇಕಾನಂದರು ಹೇಳಿದ್ದಾರೆ, "ಇಂದು ನಮಗೆ ಬೇಕಾಗಿರುವುದು ಶಕ್ತಿಶಾಲಿ ವ್ಯಕ್ತಿತ್ವವನ್ನು ಬೆಳೆಸುವಂತಹ ವಿದ್ಯಾಭ್ಯಾಸವೇ ಹೊರತು, ಕೇವಲ ಕೆಲವು ವಿಚಾರಗಳನ್ನು ತಲೆಯೊಳಗೆ ತುರುಕುವಂಥದಲ್ಲ." ಈ ಮಾತನ್ನು ನಾವು ಸ್ವಲ್ಪ ಆಲೋಚಿಸಿ ನೋಡಬೇಕು. ಇಂದಿನ ವಿದ್ಯಾಭ್ಯಾಸವನ್ನು ಮತ್ತು ಅದರ ಸ್ವರೂಪವನ್ನು ಅರಿತರೆ ಸ್ವಾಮಿಜಿಯವರ ಮಾತಿನ ಅರ್ಥವನ್ನು ಅರಿಯಬಹುದು. ನೈಜ ಜೀವನಕ್ಕೆ ಬೇಕಾದ ಆವಶ್ಯಕ ವಿದ್ಯಾಭ್ಯಾಸವನ್ನು ಹೊರತುಪಡಿಸಿ, ಮಿಕ್ಕೆಲ್ಲಾ ವಿಚಾರವನ್ನು ಇಂದಿನ ಶಿಕ್ಷಣವು ಕಲಿಸುತ್ತಿದೆ. ಅದರಲ್ಲಿ ಇರುವ ಎಲ್ಲವೂ ಅನಾವಶ್ಯಕವೆಂಬುದು ಈ ಮಾತಿನ ಅರ್ಥವಲ್ಲ. ಇಂದು ವಿದ್ಯಾಭ್ಯಾಸ ಕೇವಲ ಪದವೀಧರರನ್ನು ಸೃಷ್ಟಿಸುತ್ತಿದೆಯೇ ಹೊರತು, ವಿಶ್ವವಿದ್ಯಾನಿಲಯದಿಂದ ಹೊರ ಬಂದ ನಂತರ ಸ್ವತಂತ್ರ ವ್ಯಕ್ತಿಗಳಾಗಿ ನಿಂತು ಬದುಕುವಂತಹ ಉತ್ತಮ ಮಾನವರನ್ನು ಹಾಗೂ ದೃಢತೆಯುಳ್ಳ ವ್ಯಕ್ತಿಗಳನ್ನು ರೂಪಿಸುತ್ತಿಲ್ಲ. ತಮ್ಮ ಜೀವನೋಪಾಯಕ್ಕಾಗಿ ಇತರರ ಹಂಗಿನಲ್ಲಿ ಜೀವಿಸಬೇಕಾದ ಪರಾವಲಂಬಿಗಳನ್ನು, ಸ್ವಂತ ಆಲೋಚನಾ ಸಾಮರ್ಥ್ಯವಿಲ್ಲದವರನ್ನು ಈ ವಿದ್ಯಾಭ್ಯಾಸವು ಸೃಷ್ಟಿಸುತ್ತಿದೆ.

ಇಂದಿನ ವಿದ್ಯಾಭ್ಯಾಸ ಯಾವ ರೀತಿ ಇದೆ ಎಂದರೆ, ಹಲವಾರು ವಿಷಯಗಳನ್ನು ತಲೆಯೊಳಗೆ ತುಂಬಲು ಪ್ರಯತ್ನಿಸಿ, ಒಂದು ನಿರ್ದಿಷ್ಟ ಕಾಲಾವಧಿಯಲ್ಲಿ ವಿದ್ಯಾರ್ಥಿಯು ಎಷ್ಟು ತುಂಬಿಕೊಂಡಿದ್ದಾನೆ ಎಂಬುದನ್ನು ಪರೀಕ್ಷೆ ಮಾಡಲು ಅದನ್ನು ಒಂದು ಗಂಟೆಯಲ್ಲೊ ಅಥವಾ ಮೂರು ಗಂಟೆಗಳಲ್ಲೊ ಎಷ್ಟು ಚೆನ್ನಾಗಿ ಬರೆಯುತ್ತಾನೆ ಎಂಬ ಆಧಾರದ ಮೇಲೆ ಅವನನ್ನು ಒಬ್ಬ 'ಪದವೀಧರ' ನನ್ನಾಗಿಸಿ, ಸಮಾಜಕ್ಕೆ ಮತ್ತೊಬ್ಬ ನಿರುಪಯೋಗಿ ವ್ಯಕ್ತಿಯನ್ನು ತಯಾರು ಮಾಡಿದ್ದೇವೆ ಎಂದು ತೋರಿಸುವುದಾಗಿದೆ. ವಿಶ್ವವಿದ್ಯಾನಿಲಯಗಳು ಕೇವಲ ನಿರುದ್ಯೋಗಿ, ನಿರುತ್ಸಾಹಿ ಮತ್ತು ನಾಮಮಾತ್ರದ ಪದವೀಧರರನ್ನು ಉತ್ಪಾದಿಸುವ ಕಾರ್ಖಾನೆಗಳಾಗಿ ಉಳಿಯದೆ ಉತ್ಸಾಹಿ, ಶ್ರದ್ಧಾವಂತ ಆತ್ಮವಿಶ್ವಾಸದ ಪ್ರತಿಮೂರ್ತಿಗಳನ್ನು ಬೆಳೆಸುವ ದೇವಾಲಯಗಳಾಗಬೇಕು.

ಸ್ವಾಮಿ ವಿವೇಕಾನಂದರು ಹೇಳುತ್ತಾರೆ, "ನಾನು ಮತ್ತೊಮ್ಮೆ ವಿದ್ಯಾಭ್ಯಾಸ ಮಾಡಬೇಕಾಗಿ ಬಂದರೆ ಮೊದಲು ಮನಸ್ಸನ್ನು ನಿಗ್ರಹಿಸುವುದನ್ನು ಕಲಿತು ಅನಂತರ ಪಠ್ಯಪುಸ್ತಕವನ್ನು ಓದುತ್ತೇನೆ". ವಿದ್ಯಾರ್ಥಿಗಳು ಮೊದಲು ಅರಿಯಬೇಕಾದ ವಿಚಾರವೆಂದರೆ ಈ ತಿಳಿವು ಎಂಬುದು ಎಲ್ಲೋ ಹೊರಗೆ ಅಡಗಿ ಕುಳಿತಿಲ್ಲ. ಅದು ಮಾನವನ ಒಳಗಡೆಯೇ ಇದೆ ಎಂಬುದು. ಅದನ್ನೇ ಸ್ವಾಮಿ ವಿವೇಕಾನಂದರು ಹೇಳಿದುದು, "ವಿದ್ಯೆಯೆಂಬುದು ಈಗಾಗಲೇ ಮಾನವನಲ್ಲಿರುವ ಪರಿಪೂರ್ಣತೆಯ ಅಭಿವ್ಯಕ್ತಿ" ಎಂಬುದಾಗಿ. ಒಂದು ವಸ್ತುವನ್ನು ಮುಚ್ಚಿರುವ ಪರದೆಯನ್ನು ಸರಿಸಿ ಆ ವಸ್ತುವನ್ನು ಪಡೆಯುವಂತೆ ಆತನು ತನ್ನೊಳಗಿರುವ ಅರಿವನ್ನು ಪಡೆಯುತ್ತಾನೆ. ವಿಜ್ಞಾನಿಗಳು ಹಲವು ನಿಯಮಗಳನ್ನು ಆವಿಷ್ಕರಿಸುತ್ತಾರೆ. ಹೊರ ಪ್ರಪಂಚದಲ್ಲಿ ಎಲ್ಲೋ ಅಡಗಿಕೊಂಡಿರುವುದನ್ನು ಅವರು ಹುಡುಕಿ ತರಲಿಲ್ಲ. ತಮ್ಮೊಳಗಿದ್ದ ಜ್ಞಾನಪ್ರಕ್ರಿಯೆಯನ್ನು, ಏಕಾಗ್ರತೆಯ ಮೂಲಕ ಜಾಗೃತಗೊಳಿಸಿಕೊಂಡಾಗ, ಅವರ ಮನಸ್ಸು ಸೂಕ್ಷ್ಮತೆಯನ್ನು ಪಡೆದು

ಕೊಂಡಾಗ, ಸತ್ಯಗಳು, ನಿಯಮಗಳು ಗೋಚರವಾಗುತ್ತವೆ. ಅವುಗಳನ್ನು ಬಳಸಿ ತಂತ್ರಜ್ಞಾನದ ಮೂಲಕ ಹೊಸ ಹೊಸ ವಸ್ತುಗಳೂ ತಯಾರಾಗುತ್ತವೆ. ವಸ್ತುಗಳ ಜೋಡಣೆ, ಸೃಷ್ಟಿಯ ಹಿಂದೆ ಇರುವ ಅರಿವು ಮೂಲತಃ ಮಾನವನ ಮನಸ್ಸಿನಲ್ಲಿದೆ.

ವಿದ್ಯಾಭ್ಯಾಸವು ಉತ್ತಮ ವ್ಯಕ್ತಿಗಳನ್ನು ರೂಪಿಸಬೇಕಾದರೆ ಮೌಲ್ಯಗಳ ಶಿಕ್ಷಣವೂ ದೊರೆಯುಬೇಕು. ಸಮಾಜಕ್ಕೆ ಬೇಕಾಗಿರುವುದು ನಿಸ್ವಾರ್ಥ ಧೈರ್ಯಶಾಲಿ ವ್ಯಕ್ತಿಗಳು. ವಿದ್ಯಾಭ್ಯಾಸವು ಧರ್ಮವನ್ನು, ನೈತಿಕತೆಯನ್ನು ಆಧಾರವಾಗಿ ಹೊಂದಿದ್ದರೆ ಜೀವನದ ಬೆಳವಣಿಗೆಗೆ ವ್ಯಕ್ತಿ-ವ್ಯಕ್ತಿತ್ವಗಳ ಸಮರಸ ವಿಕಾಸಕ್ಕೆ ಹಾಗೂ ಉನ್ನತ ಮೌಲ್ಯಗಳುಳ್ಳ ಸಮಾಜಕ್ಕೆ ಕಾರಣವಾಗುವುದು. ವಿಶ್ವವಿದ್ಯಾನಿಲಯದಿಂದ ಹೊರಬಂದಾಗ ವಿದ್ಯಾರ್ಥಿಗೆ ಸಮಾಜದ ಒಳಿತು ಕೆಡಕುಗಳ ಹಾಗೂ ಅದರ ಸಮರ್ಥ ನಿರ್ವಹಣೆಯ ಬಗ್ಗೆ ಅರಿವು ಇರಬೇಕು. ಆತನಿಗೆ ತನ್ನ ಆಂತರಿಕ ಶಕ್ತಿಯ ಅರಿವಿದ್ದು, ತನ್ನ ಜೀವನದ ಮೂಲಕ ತಾನು ಹಲವರಿಗೆ ದಾರಿದೀಪವಾಗಬಹುದು ಎಂಬ ಆದರ್ಶವಿರಬೇಕು.

ಸರ್ವಾಂಗೀಣ ವಿದ್ಯಾಭ್ಯಾಸ ಎಂದರೆ ಏನು? ಒಬ್ಬ ವ್ಯಕ್ತಿಯ ಪರಿಪೂರ್ಣ ವಿಕಾಸಕ್ಕೆ ನೈತಿಕ, ಬೌದ್ಧಿಕ, ಶಾರೀರಿಕ ಹಾಗೂ ಆಧ್ಯಾತ್ಮಿಕ ಎಂಬ ನಾಲ್ಕು ರೀತಿಯ ಬೆಳವಣಿಗೆಗಳ ಆವಶ್ಯಕತೆಯಿದೆ. ವಿದ್ಯಾಭ್ಯಾಸವೆಂಬುದು ಇವೆಲ್ಲವನ್ನೂ ಪೋಷಿಸುವಂತಿರಬೇಕು. ಒಬ್ಬ ವಿದ್ಯಾರ್ಥಿಗೆ ಆವಶ್ಯಕವಾಗಿ ಬೇಕಾದ ಮೂಲಭೂತವಾದ ಗುಣಗಳನ್ನು ಇಂತಹ ಶಿಕ್ಷಣ ನೀಡಬಲ್ಲದು. ಅಂತಹ ಗುಣಗಳನ್ನು ಕುರಿತು ಆಲೋಚಿಸೋಣ:

↔ ಆತ ಪರರ ವಸ್ತುಗಳನ್ನು—ಹೊನ್ನು, ಮಣ್ಣು, ಹೆಣ್ಣು—ಏನೇ ಆಗಲಿ ಬಯಸುವಂತಹ ದುರ್ಗುಣಗಳನ್ನು ತನ್ನಿಂದ ನಿರ್ಮೂಲನ ಮಾಡಿಕೊಳ್ಳುವಂತಹ ನೈತಿಕ, ಸಾತ್ವಿಕ ಹಾಗೂ ಉತ್ತಮ ಮಾನವೀಯ ಗುಣಗಳನ್ನು ಪಡೆಯಬೇಕು. ಇತರರ ಕಷ್ಟಗಳಲ್ಲಿ ಭಾಗಿಯಾಗುವ ಅನುಕಂಪ, ಸೇವಾಭಾವಗಳಿರಬೇಕು. ಹಿರಿಯರೊಬ್ಬರು ಹೇಳಿರುವಂತೆ, ಮಾತಾಡಿ ತೋರಿಸುವುದಕ್ಕಿಂತಲೂ ಮಾಡಿ ತೋರಿಸಬೇಕು. ಇಂದು ನಮ್ಮ ಸುತ್ತಲೂ ಕೇವಲ ಮಾತನಾಡುವವರು ಇದ್ದಾರೆಯೇ ಹೊರತು, ನಮ್ಮ ಕಷ್ಟವನ್ನು ಅವರ ಬಳಿ ಹೇಳಿಕೊಂಡಾಗ ಸಹಾಯವನ್ನಾಗಲಿ, ಸಹಾನುಭೂತಿಯನ್ನಾಗಲಿ ತೋರುವವರು ಅತಿ ವಿರಳ. ತಮ್ಮ ಧ್ಯೇಯವನ್ನು ಕೇವಲ ಕೆಲವೇ ಪದಗಳಲ್ಲಿ ಇಡಬಹುದು ಎಂದು ಸ್ವಾಮಿಜಿ ಹೀಗೆ ಹೇಳುತ್ತಾರೆ: "ಪವಿತ್ರತೆ, ತಾಳ್ಮೆ, ದೃಢತೆ ಹಾಗೂ ಇದೆಲ್ಲಕ್ಕಿಂತ ಹೆಚ್ಚಾಗಿ ಪ್ರೀತಿ. ಸಾಮಾನ್ಯ ಮಟ್ಟದಲ್ಲಿ ಈ ಪ್ರೀತಿ ಕೇವಲ ತನ್ನನ್ನು ಹಾಗೂ ತನ್ನವರನ್ನು ಮಾತ್ರ ಒಳಗೊಂಡಿರುತ್ತದೆ. ನೈಜವಾದ ಪ್ರೀತಿಯು ಯಾವುದೇ ಭೇದಭಾವವಿರದೆ ಎಲ್ಲಾ ಜೀವಿಗಳನ್ನೂ ಒಳಗೊಂಡಿರುತ್ತದೆ. ಅವರಿಂದ ಏನನ್ನಾದರೂ ಪ್ರತಿಯಾಗಿ ಪಡೆಯುವ ಯಾವುದೇ ನಿರೀಕ್ಷೆ, ಆಶಾಭಾವನೆ ಇಲ್ಲವಾಗಿರುತ್ತದೆ."

↔ ಬೌದ್ಧಿಕವಾಗಿ ಆತ ದೃಢವಾಗಿರಬೇಕು. ವ್ಯಕ್ತಿಯು ಮಾಡುವ ಹಾಗೂ ಮಾಡಲು ಯೋಚಿಸಿರುವ ಕಾರ್ಯಗಳನ್ನು ಯಶಸ್ವಿಯಾಗಿ, ಸಮರ್ಥವಾಗಿ ಮಾಡಿ ಮುಗಿಸಬೇಕಾದರೆ ಅವನ ಬುದ್ಧಿಶಕ್ತಿಯ ಬೆಳವಣಿಗೆಯಾಗಿರಬೇಕು. ತನ್ನ ಕಾರ್ಯದ ಸಂಪೂರ್ಣ ಮಾಹಿತಿಯನ್ನು ಅರಿತು, ಮುಂಜಾಗ್ರತೆಯಿಂದ ನಡೆಯುವ ಬುದ್ಧಿವಂತಿಕೆ ಇರಬೇಕಾಗುತ್ತದೆ. ಅದಮ್ಯ ಉತ್ಸಾಹ ಹಾಗೂ ತನ್ನ ಕಾರ್ಯದಲ್ಲಿ ಬರುವ ಎಲ್ಲಾ ಎಡರುತೊಡರುಗಳನ್ನು ಎದುರಿಸಿ ಮುನ್ನಡೆವ ಛಲವಿರಬೇಕು.

↔ ದೈಹಿಕವಾಗಿ ಆತ ಬಲಶಾಲಿಯಾಗಿರದಿದ್ದರೆ ಮೇಲಿನ ಎರಡೂ ಗುಣಗಳಿಂದ ಯಾವುದೇ ಪ್ರಯೋಜನವಿಲ್ಲ. ಅದು ಕೇವಲ ಪುಸ್ತಕದೊಳಗಿನ ಬದನೆಕಾಯಿಯಂತೆ ಅಷ್ಟೆ, ಅಡುಗೆಗೆ ಬಾರದು. ಆಯಾಸವನ್ನೇ ಕಾಣದೆ ಅದಮ್ಯ ಉತ್ಸಾಹದಿಂದ ಕಾರ್ಯಮಗ್ನನಾಗಿ ತನ್ನ ಗುರಿಯನ್ನು ಬಿಡದೆ ಸಾಧಿಸುವ ಛಲವನ್ನು ನೀಡುವಂತಹದು ಈ ದೈಹಿಕ ಶಕ್ತಿ. ಸ್ವಾಮಿ ವಿವೇಕಾನಂದರು ಹೇಳುತ್ತಾರೆ, "ಬುದ್ಧಿ ಮತ್ತು ಮಾಂಸಖಂಡಗಳು ಸಮಪ್ರಮಾಣದಲ್ಲಿ ಬೆಳೆದಿರಬೇಕು. ಇದರಲ್ಲಿ ಯಾವುದೊಂದು ಹೆಚ್ಚುಕಡಿಮೆಯಾದರೂ ಅದರಿಂದ ಪ್ರಯೋಜನವಿಲ್ಲ". ಅಂದರೆ ಕ್ರಿಯಾಶಕ್ತಿಯು ಈ ದೈಹಿಕ ಶಕ್ತಿಯನ್ನು ಅವಲಂಬಿಸಿದೆ. ಇಲ್ಲಿ ನಾವು ಸ್ವಾಮಿ ವಿವೇಕಾನಂದರು ಹೇಳುವ ಮತ್ತೊಂದು ಮಾತನ್ನು ಗಮನಿಸಬೇಕು: "ಕಬ್ಬಿಣದಂತಹ ಮಾಂಸಖಂಡಗಳು, ಉಕ್ಕಿನಂತಹ ನರಮಂಡಲಗಳು ಮತ್ತು ಮಿಂಚಿನಂತಹ ಇಚ್ಛಾಶಕ್ತಿಯಿರುವಂತಹ ಯುವಕರು ಇಂದು ನಮ್ಮ ರಾಷ್ಟ್ರಕ್ಕೆ ಬೇಕಾಗಿದ್ದಾರೆ."

↔ ಆಧ್ಯಾತ್ಮಿಕ ಶಕ್ತಿ ಇದೆಲ್ಲದರ ಹಿಂದೆ ಇರುವ ಮೂಲ ಶಕ್ತಿ. ಮೇಲಿನವು ವ್ಯಕ್ತಿಯ ವಿಕಸನಕ್ಕೆ ಅವಕಾಶ ಕಲ್ಪಿಸುವ ಮಾರ್ಗಗಳಾದರೂ, ಈ ಕೊನೆಯ ಮತ್ತು ಬಹು ಮುಖ್ಯವಾದ ಆಧ್ಯಾತ್ಮಿಕ ಶಕ್ತಿಯು ಇವುಗಳಿಗೆ ಆಧಾರಸ್ತಂಭವಿದ್ದಂತೆ. ಇದು ವ್ಯಕ್ತಿಯ ನೈತಿಕ ಬಲವನ್ನು ಪ್ರಚೋದಿಸುತ್ತದೆ ಮತ್ತು ರಕ್ಷಕಶಕ್ತಿಯಾಗಿ ನಿಲ್ಲುತ್ತದೆ. ಅಲ್ಲದೆ ಇದು ನಮ್ಮ ಅಂತರಂಗದ ಜ್ಞಾನವನ್ನು — ಜ್ಞಾನವೇ ಮೂರ್ತಿವೆತ್ತ ಆ ಆತ್ಮಶಾಂತಿಯನ್ನು — ನೀಡುವ ಶಕ್ತಿ. ಪ್ರತಿಯೊಬ್ಬ ವ್ಯಕ್ತಿಯಲ್ಲೂ ಇರುವ ಈ ಚೈತನ್ಯದ ಚಿಲುಮೆಯೇ ನಮ್ಮ ಎಲ್ಲ ಚಟುವಟಿಕೆಗಳ ಹಿಂದಿರುವ ಪ್ರೇರಕಶಕ್ತಿ. ಚಲನಚಿತ್ರವನ್ನು ಪರದೆಯ ಮೇಲೆ ನೋಡುತ್ತೇವೆ. ನಾನಾ

ಭಾವನೆಗಳು, ದೃಶ್ಯಗಳು ಅದರ ಮೇಲೆ ಬಂದು ಹೋಗುತ್ತವೆ. ಪರದೆಯಿಲ್ಲದಿದ್ದರೆ, ಇದಾವುದೂ ಸಾಧ್ಯವಾಗುತ್ತಿರಲಿಲ್ಲ. ಮೃತಶರೀರದಲ್ಲಿ ಎಲ್ಲ ಅಂಗಗಳಿದ್ದರೂ ಅದು ಜೀವವುಳ್ಳ ವ್ಯಕ್ತಿಯಂತೆ ವ್ಯವಹರಿಸಲಾರದು. ಎಲ್ಲರಲ್ಲಿರುವ ಆತ್ಮ ಶಕ್ತಿಯೂ ಒಂದೇ. ಒಬ್ಬರಲ್ಲಿ ಅದು ಹೆಚ್ಚಾಗಿಲ್ಲ, ಮತ್ತೊಬ್ಬನಲ್ಲಿ ಕಡಿಮೆಯಾಗಿಲ್ಲ. ಅದರ ಅಭಿವ್ಯಕ್ತಿಗೆ ಅನುವು ಮಾಡಿಕೊಡುವುದೇ ವಿದ್ಯಾಭ್ಯಾಸದ ಗುರಿ. ಜಾತಿ, ಕುಲ, ಗೋತ್ರ, ಪಂಗಡಗಳ ಭೇದಗಳನ್ನು ಎಣಿಸದೆ ಎಲ್ಲರೂ ಈ ಆತ್ಮವಸ್ತುವಿನಲ್ಲಿ ಶ್ರದ್ಧೆ ತಾಳಿದರೆ, ಎಲ್ಲ ಸಮಸ್ಯೆಗಳನ್ನೂ ಎದುರಿಸಬಲ್ಲ ಆತ್ಮವಿಶ್ವಾಸ ಮೂಡುವುದು. ಪಾಶ್ಚಾತ್ಯ ಚಿಂತಕ ವೆಲ್ಲಿಂಗ್ಟನ್ ಡ್ಯೂಕ್ ಎಂಬುವವರು ಹೀಗೆ ಹೇಳುತ್ತಾರೆ— "ಧರ್ಮಶ್ರದ್ಧೆಯನ್ನು ಕಲಿಸದ ಶಿಕ್ಷಣದಿಂದ ಮನುಷ್ಯರು ಬುದ್ಧಿವಂತ ಪಿಶಾಚಿಗಳಾಗುತ್ತಾರೆ". ಅಧ್ಯಾತ್ಮದ ಲೇಪನವಿಲ್ಲದ ವಿದ್ಯೆಯು ಸ್ವಾರ್ಥಿಗಳನ್ನು ಹಾಗೂ ನೈತಿಕ ಪ್ರಜ್ಞೆಯಿಲ್ಲದ ರೋಗಗ್ರಸ್ತ ವ್ಯಕ್ತಿಗಳನ್ನು ಹುಟ್ಟಿಸುವುದು. ಧಾರ್ಮಿಕ ನಂಬಿಕೆಯು ವಿದ್ಯಾರ್ಥಿಯಲ್ಲಿನ ಕೀಳರಿಮೆಯನ್ನು ಹೋಗಲಾಡಿಸುತ್ತದೆ, ಅವನನ್ನು ಪ್ರಶಾಂತಗೊಳಿಸುತ್ತದೆ, ಏಕಾಗ್ರ ಚಿತ್ತದವನನ್ನಾಗಿಸುತ್ತದೆ. ಇಂದು ವಿದ್ಯಾರ್ಥಿಗಳಿಗೆ ಮುಖ್ಯವಾಗಿ ಬೇಕಾಗಿರುವ ಆತ್ಮವಿಶ್ವಾಸವನ್ನು ನೀಡುತ್ತದೆ.

ಇನ್ನೊಂದು ಪ್ರಮುಖ ಅಂಶ — ವಿದ್ಯಾರ್ಥಿಗಳ ಮನ ಮುಟ್ಟುವಂತೆ ಪಾಠ ಮಾಡುವ, ಅವರ ಸಮಸ್ಯೆಗಳನ್ನು ಅರಿತು ಅವುಗಳನ್ನು ಪ್ರೀತಿ, ವಿಶ್ವಾಸಗಳಿಂದ ಬಗೆಹರಿಸುವ ಮತ್ತು ಅವರಲ್ಲಿ ಪ್ರಖರ ರಾಷ್ಟ್ರಪ್ರಜ್ಞೆ, ಆತ್ಮವಿಶ್ವಾಸ, ಸಚ್ಚಾರಿತ್ರ್ಯ, ದೈವಭಕ್ತಿ, ಪ್ರಾಮಾಣಿಕತೆಗಳನ್ನು ಬೆಳೆಸಿ ತನ್ಮೂಲಕ ರಾಷ್ಟ್ರ ನಿರ್ಮಾಣ ಮಾಡುವಂತಹ ಶಿಕ್ಷಕರ ಆವಶ್ಯಕತೆ ಇದೆ. ಹಾಗೆಯೇ, ವಿದ್ಯಾಭ್ಯಾಸದ ಜವಾಬ್ದಾರಿಯ ಅರಿವುಳ್ಳ, ಹಿರಿಯರನ್ನು ಗೌರವಿಸುವ, ದುಷ್ಟ ಚಟಗಳಿಂದ ದೂರವಿದ್ದು, ಪರಸ್ಪರ ಸೌಹಾರ್ದ ಭಾವನೆಯನ್ನು ಕಲಿಯುವಂತಹ ಶ್ರದ್ಧಾನ್ವಿತ ವಿದ್ಯಾರ್ಥಿಗಳ ಆವಶ್ಯಕತೆಯೂ ಇದೆ. ತಂದೆತಾಯಿಗಳು ಕೊಡುವ ಪಾಕೆಟ್ ಮನಿಯನ್ನು ಖರ್ಚು ಮಾಡುತ್ತ ಅಪ್ರಯೋಜಕ ಕಾರ್ಯಗಳಲ್ಲಿ ಕಾಲ ಕಳೆಯುತ್ತ, ತಮ್ಮ ಯೌವನ ಹಾಗೂ ಅಪ್ರಬುದ್ಧ ಬುದ್ಧಿಯ ಮದದಿಂದ ಕುರುಡರಂತೆ ವರ್ತಿಸುವುದನ್ನು ಯುವಕಯುವತಿಯರು ಬಿಡಬೇಕು. ತಮ್ಮ ದೋಷಗಳನ್ನು ತಿದ್ದುವ, ಸರಿಯಾದ ದಾರಿಯಲ್ಲಿ ನಡೆಸುವ ತಮ್ಮ ಹಿರಿಯರನ್ನು, ಉಪಾಧ್ಯಾಯರನ್ನು ಗೌರವದಿಂದ ಕಾಣುವುದು ಕೂಡ ವಿದ್ಯಾರ್ಥಿಗಳ ಆದ್ಯ ಕರ್ತವ್ಯ. ಶಿಕ್ಷಣದ ಅವಿಭಾಜ್ಯ ಅಂಶ ಶಿಸ್ತು ಎಂಬುದನ್ನು ಯಾರೂ ಮರೆಯುವಂತಿಲ್ಲ. ಒಬ್ಬ ಪಿ.ಟಿ. ಮಾಸ್ಟರ್ ಹುಡುಗಿಯರ ಮುಂದೆ ತಮ್ಮನ್ನು ಬೈದರೆಂಬ ಕಾರಣಕ್ಕೆ ಕೇವಲ ಏಳನೇ ತರಗತಿಯಲ್ಲಿ ಓದುತ್ತಿರುವ ಮೂವರು ಬಾಲಕರು, ಪಿ.ಟಿ. ಮಾಸ್ಟರ್‌ರನ್ನು ಹೊಡೆದು, ಓಡಾಡದಂತೆ ಮಾಡಿರುವುದು ಒಂದು ಇತ್ತೀಚಿನ ಸುದ್ದಿ. ಅದನ್ನು ಕೇಳಿದಾಗ ನಮ್ಮ ಮಕ್ಕಳು ಇಂದು ಎಂಥ ಅಧೋಗತಿಗೆ ಇಳಿದಿದ್ದಾರೆ ಎಂಬುದನ್ನು ಅರಿಯಬಹುದು.

ಈಗಾಗಲೇ ಇರುವ ಶಿಕ್ಷಣದ ಮಾದರಿಯನ್ನು ಬದಲಾಯಿಸುವುದು ಅಷ್ಟು ಸುಲಭಸಾಧ್ಯವೇನಲ್ಲ. ಸರ್ಕಾರವಾಗಲಿ, ಜನಸಾಮಾನ್ಯರಾಗಲಿ ಸಂಪೂರ್ಣವಾದ ಇಚ್ಛೆಯನ್ನು ತೋರಿಸಿದರೆ ಮಾತ್ರ ಅದು ಸಾಧ್ಯ. ಭವ್ಯ ಭಾರತದ ಸಂಸ್ಕೃತಿಯೊಂದಿಗೆ, ಸ್ವಾತಂತ್ರ್ಯ ಹೋರಾಟಗಾರರು ತಮ್ಮ ಜೀವನದಲ್ಲಿ ಅಸಾಧ್ಯವಾದುದನ್ನು ಸಾಧಿಸಿದ ರೀತಿ, ಎಲ್ಲಾ ಕ್ಷೇತ್ರಗಳ ಸಾಧಕರ, ಆಧ್ಯಾತ್ಮಿಕ ಪುರುಷರ ಹಾಗೂ ಧರ್ಮಗ್ರಂಥಗಳಲ್ಲಿರುವ ಉದಾತ್ತ ವಿಚಾರಗಳನ್ನು ಪಠ್ಯಪುಸ್ತಕಗಳು ನೀಡುವಂತೆ ಆಗಬೇಕು. ಇದು ಸರ್ಕಾರದ ಕರ್ತವ್ಯ.

ವಿಚಾರಶೀಲ ಬುದ್ಧಿಯೊಂದಿಗೆ ನೈತಿಕತೆ, ಧಾರ್ಮಿಕತೆಗಳನ್ನೂ ಚಿಕ್ಕ ವಯಸ್ಸಿನಿಂದಲೇ ಮಕ್ಕಳಿಗೆ ಕಲಿಸುತ್ತ ಬಂದರೆ ಸ್ವಾಮಿ ವಿವೇಕಾನಂದರು ಬಯಸಿದಂತಹ ಭವ್ಯ ಭಾರತದ ನಿರ್ಮಾಣ ಮತ್ತು ಶಕ್ತಿಶಾಲಿ ವ್ಯಕ್ತಿತ್ವದ ನಿರ್ಮಾಣ ಸಾಧ್ಯ. ಇದು ತಂದೆ, ತಾಯಿ ಮತ್ತು ಗುರುಗಳ ಕಾರ್ಯ. ಇಂದಿನ ಹಾಗೂ ಮುಂದಿನ ಜನಾಂಗದ ಭವಿಷ್ಯ ಇವರ ಕೈಯಲ್ಲಿದೆ.

ಅಧ್ಯಯನದ ಸ್ಥಳದಲ್ಲಿರಬೇಕಾದ ಪ್ರೀತಿ, ವಿಶ್ವಾಸ, ಸೌಹಾರ್ದತೆಗಳ ಭಾವನೆಯನ್ನು **ಸಹನಾವವತು..** ಎಂದು ಪ್ರಾರಂಭವಾಗುವ ಪ್ರಸಿದ್ಧವಾದ ವೇದಮಂತ್ರ ನಿರೂಪಿಸುತ್ತದೆ. 'ಭಗವಂತನು ನಮ್ಮನ್ನು ರಕ್ಷಿಸಲಿ, ನಮ್ಮನ್ನು ಪೋಷಿಸಲಿ, ನಮ್ಮನ್ನು ಶಕ್ತಿವಂತರನ್ನಾಗಿಸಲಿ. ಆತನ ಕೃಪೆಯಿಂದ ನಮ್ಮ ಅಧ್ಯಯನ ಕಾರ್ಯವು ತೇಜಸ್ಸಿನಿಂದ ಕೂಡಿರಲಿ. ನಮ್ಮಲ್ಲಿ ದ್ವೇಷವಿಲ್ಲದೆ ಇರಲಿ, ಸೌಹಾರ್ದತೆ ನೆಲೆಸಲಿ, ಶಾಂತಿಯಿರಲಿ." ಇದು ಗುರುಕುಲಗಳಲ್ಲಿ ಗುರು ಹಾಗೂ ಶಿಷ್ಯರು ಒಟ್ಟಾಗಿ ಹೇಳುತ್ತಿದ್ದ ಪ್ರಾರ್ಥನೆ. ಇಂತಹ ವಾತಾವರಣವೇ ಶಿಕ್ಷಣದ ಮೊದಲನೆಯ ಮೂಲಭೂತ ಆವಶ್ಯಕತೆ ಎಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ. ✪

**ವಿದ್ಯಾಭ್ಯಾಸವೆಂದರೇನು? ಪುಸ್ತಕ ಪಾಂಡಿತ್ಯವೇ? ಅಲ್ಲ. ಹಲವು ವಿಧದ ಜ್ಞಾನಾರ್ಜನೆಯೇ? ಅದೂ ಅಲ್ಲ. ಯಾವ ತರಬೇತಿಯ ಮೂಲಕ ಇಚ್ಛಾಶಕ್ತಿಯ ಪ್ರವಾಹ ಮತ್ತು ಅಭಿವ್ಯಕ್ತಿಗಳು ನಿಯಂತ್ರಣಕ್ಕೆ ಒಳಗಾಗಿ ಫಲಕಾರಿಯಾಗುವವೋ ಅದೇ ಶಿಕ್ಷಣ.**

**- ಸ್ವಾಮಿ ವಿವೇಕಾನಂದ**